ಸೇಡಂನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್ಸು ನಿಲ್ದಾಣದ ರಿಪೇರಿ

೯೭೦(೧೧೧೭) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಗುಲ್ಬರ್ಗ ಜಿಲ್ಲೆ ಸೇಡಂ ಬಸ್ ನಿಲ್ದಾಣ ಮಳೆಗಾಲದಲ್ಲಿ ಕೆಸರಾಗಿ ಪ್ರಯಾಣಿಕರಿಗೆ ಅನಾನುಕೂಲ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರವು ಈ ಬಗ್ಗೆ ಕೈಗೊಂಡ ಕ್ರಮವೇನು?

ಇ) ಇದನ್ನು ರಿಪೇರಿ ಮಾಡಿ ಪ್ರಯಾಣಿಕರಿಗೆ ಸೌಲಭ್ಯ ಯಾವಾಗ ಒದಗಿಸಲಾಗುವುದು?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು).—

ಅ) ಹೌದು.

ಆ) ಸೂಕ್ತ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಇ) ಒಂದು ತಿಂಗಳಲ್ಲಿ ದುರಸ್ತಿ ಕಾರ್ಯವನ್ನು (ರಿಪೇರಿ) ಕೈಗೊಳ್ಳಲಾಗುವುದು.

ಹುಬ್ಬಳ್ಳಿ ವಿಭಾಗದಲ್ಲಿ ಷೆಡ್ಯೂಲ್ ಬಸ್ಸುಗಳ ಸಂಖ್ಯೆ

೯೭೨(೧೧೬೩) ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಧಾರವಾಡ ಜಿಲ್ಲೆಯ ಹುಬ್ಬಳ್ಳಿ ವಿಭಾಗದಲ್ಲಿ ಎಷ್ಟು ಷೆಡ್ಯೂಲ್ ಬಸ್ಸುಗಳಿವೆ. ಇವುಗಳ ಪೈಕಿ ಹುಬ್ಬಳ್ಳಿ—ಧಾರವಾಡ ನಗರಗಳಲ್ಲಿ ಎಷ್ಟು ಷೆಡ್ಯೂಲ್ ಬಸ್ಸುಗಳಿವೆ? ಗ್ರಾಮಾಂತರ ಪ್ರದೇಶಗಳಲ್ಲಿ ಹುಬ್ಬಳ್ಳಿ—ಧಾರವಾಡ ಹೊರತುಪಡಿಸಿ ಎಷ್ಟು ಷೆಡ್ಯೂಲ್ ಬಸ್ಸುಗಳಿವೆ?

ಆ) ಹಾಗಿದ್ದಲ್ಲಿ ನಗರ ಪ್ರದೇಶ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಷೆಡ್ಯೂಲ್ ಬಸ್ಸುಗಳ ಓಡಾಟದಲ್ಲಿ ತಾರತಮ್ಯ ಏಕೆ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು).—

ಅ) ಹುಬ್ಬಳ್ಳಿ ವಿಭಾಗವು ೭೫೮ ಮಾರ್ಗಸೂಚಿಗಳ ಸಂಚಾರ ಒದಗಿಸಿದ್ದು ಇವುಗಳ ಪೈಕಿ ೧೯೭ ಮಾರ್ಗಸೂಚಿಗಳು ನಗರ ಹಾಗೂ ಹೊರವಲಯ ಮಾರ್ಗಸೂಚಿಗಳಾಗಿ ಹುಬ್ಬಳ್ಳಿ—ಧಾರವಾಡ ಪ್ರದೇಶಗಳಲ್ಲಿ ಸಂಚರಿಸುತ್ತಿವೆ. ಇನ್ನುಳಿದ ೫೬೧ ಮಾರ್ಗಸೂಚಿಗಳು ಗ್ರಾಮೀಣ ಪ್ರದೇಶಗಳಲ್ಲಿ ಸಂಚರಿಸುತ್ತಿವೆ.

ಆ) ಇದರಲ್ಲಿ ಯಾವುದೇ ರೀತಿಯ ತಾರತಮ್ಯವಿಲ್ಲ. ಸಂಚಾರದ ಒತ್ತಡಕ್ಕನುಗುಣವಾಗಿ ಸಾರಿಗೆ ಸೌಲಭ್ಯವನ್ನು ಒದಗಿಸಲಾಗಿದೆ.

ಶಿಗ್ಗಾಂ ಮತ್ತು ಸವಣೂರು ತಾಲ್ಲೂಕಿಗೆ ಷೆಡ್ಯೂಲ್ ಬಸ್ಸುಗಳು

೯೭೨(೧೧೬೩ಬಿ) ಶ್ರೀ ಮಂಜುನಾಥ್ ಸಿ ಕೊನ್ನೂರು (ಶಿಗ್ಗಾಂವ್).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಶಿಗ್ಗಾಂ ಮತ್ತು ಸವಣೂರು ತಾಲ್ಲೂಕುಗಳ ಅನೇಕ ಹಳ್ಳಿಗಳಲ್ಲಿ ಬಸ್ಸಿನ ಸೌಕರ್ಯದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಕೂಡಲೇ ಷೆಡ್ಯೂಲ್ ಬಸ್ಸುಗಳನ್ನು ಒದಗಿಸುವ ವ್ಯವಸ್ಥೆಯ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಿರಾ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು).—

ಅ) ಶಿಗಾಂ ಹಾಗೂ ಸವಣೂರು ತಾಲ್ಲೂಕುಗಳಲ್ಲಿ ವಾಹನಗಳು ಕ್ರಮಿಸಲು ಸಾಧ್ಯವಾಗುವಂತಹ ರಸ್ತೆಗಳನ್ನು ಹೊಂದಿರುವ ಎಲ್ಲಾ ಹಳ್ಳಿಗಳಿಗೂ ಸೂಕ್ತವಾದ ಸಾರಿಗೆ ಸೌಲಭ್ಯಗಳನ್ನು ಒದಗಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.